# ತೀ.ನಂ.ಶ್ರೀ.



ಬೆಂಗಳೂರಿಗೆ ನಾನು ಹೋಗುವುದೋ ಬೇಡವೋ ಎಂದು ತೂಗುಯ್ಯಲೆಯಲ್ಲಿ ಇದ್ದೆ.

ನಿರಂಜನ ಕಾಗದ ಬರೆದಿದ್ದರು.

'ನಾನು ವೆಂಕಟಸುಬ್ಬಯ್ಯನವರಿಗೆ ಹೇಳಿದ್ದೇನೆ; ಪರಿಷತ್ತಿನಿಂದ ಆರ್ಡರ್ ಬರುತ್ತದೆ. ನೀವು ಪರಿಷತ್ತಿನ ಪ್ರೆಸ್ಸಿಗೆ ಬಂದು ಸೇರಿಕೊಳ್ಳಿ.'

ಕನ್ನಡ ಸಾಹಿತ್ಯ ಪರಿಷತ್ತಿಗೆ ಜಿ. ವೆಂಕಟಸುಬ್ಬಯ್ಯನವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಕೆಲವೇ ಕೆಲವು ತಿಂಗಳ ಕಾಲ. ಆಗ ನಿರಂಜನ ಕಾರ್ಯದರ್ಶಿ. ಆಗಲೇ ಅವರು ಹಾಗೆ ನನಗೆ ಕಾಗದ ಬರೆದದ್ದು.

ನಾನು ಆಗ ಮೈಸೂರಿನಲ್ಲಿ ಖಾಸಗೀ ಪ್ರೆಸ್ಸಿನ ಕೆಲಸವನ್ನು ಬಿಟ್ಟು, ಪುಸ್ತಕ ವ್ಯಾಪಾರ ಮಾಡಿಕೊಂಡಿದ್ದೆ. ನನಗೆ ಆತ್ಮೀಯರಾದ ಕೂಡಲಿ ಚಿದಂಬರಂ ಮುಂತಾದವರು 'ಮತ್ತೆ ಯಾಕೆ ಬೆಂಗಳೂರಿಗೆ ಹೋಗ್ತೀರ? ಒಂದು ಟ್ರೆಡಲ್ ಹಾಕಿಕೊಂಡು ಬಿಡಿ. ನಾವೂ ಸಹಾಯ ಮಾಡ್ತೇವೆ. ಹೇಗೂ ಪುಸ್ತಕ ವ್ಯಾಪಾರ ಇದೆ. ಇಲ್ಲೇ ಜೀವನ ಮಾಡಬಹುದು...' ಎನ್ನುತ್ತಿದ್ದರು.

ಆಗ ಒಂದು ದಿನ ಸಂಜೆ ಕುಕ್ಕರಹಳ್ಳಿ ಕೆರೆಯ ಬಳಿ ತೀನಂಶ್ರೀ, ತಮ್ಮ ಸ್ನೇಹಿತರೊಂದಿಗೆ ವಾಕಿಂಗ್ ಹೋಗುತ್ತಾ ಇದ್ದರು. ನಾನು ಎಲ್ಲಿಗೋ ಹೋಗಿದ್ದವನು ಅವರಿಗೆ ಎದುರಾದೆ. ಸೈಕಲ್ಲಿನಿಂದ ಇಳಿದು 'ನಮಸ್ಕಾರ, ಸಾರ್' ಎಂದೆ.

'ಏನಪ್ಪಾ, ಏನು ಯೋಚಿಸಿದಿರಿ? ಪರಿಷತ್ತಿಗೆ ಹೋಗಿ ಸೇರಿಕೊಳ್ಳೋ ವಿಚಾರ?'

ಇದಕ್ಕೆ ಮೊದಲು ಒಂದು ವಾರದ ಹಿಂದೆ ಅವರನ್ನು ಯಾತಕ್ಕೋ ನಾನು ಕಾಣಲು ಹೋಗಿದ್ದಾಗ, ಹೀಗೆ ನಿರಂಜನರಿಂದ ಕಾಗದ ಬಂದಿದೆ ಎಂದು ಹೇಳಿದ್ದೆ.

'ಅದೇ ಯೋಚನೆ ಮಾಡ್ತಾ ಇದೀನಿ, ಸಾರ್. ಹೋಗೋದೋ ಬೇಡವೋ ಅಂತ.'

'ಯಾಕೆ?'

'ಇಷ್ಟು ದಿನ ಅಲ್ಲಿ ಇಲ್ಲಿ ಕೆಲಸ ಮಾಡಿದ್ದು ಸಾಕು. ಸ್ವತಂತ್ರವಾಗಿರೋಣ ಅಂತ...'

'ಅದೂ ಸರೀನೇ. ಆದರೆ...?'

'ಏನು ಹೇಳಿ, ಸಾರ್?'

'ನಿಮಗೆ ಸದ್ಯಕ್ಕೆ ಒಂದು ಕೆಲಸ ಬೇಕೇ ಬೇಕು. ಆರ್ಥಿಕವಾಗಿ ನೀವು ಅಷ್ಟು ಚೆನ್ನಾಗಿಲ್ಲ. ಅದಕ್ಕಾಗಿ ನಾನು ಹೇಳ್ತಾ ಇದೀನಿ. ನೀವು ಪರಿಷತ್ತಿನ ಪ್ರೆಸ್ಸಿಗೆ ಹೋಗುವುದು ಒಳ್ಳೆಯದು. ನೀವು ಸಾಹಿತಿ, ಜತೆಗೆ ಮುದ್ರಣ ವಿಚಾರ ಚೆನ್ನಾಗಿ ತಿಳಿದುಕೊಂಡಿದೀರ. ನಿಘಂಟು ಕೆಲಸ ಮುದ್ರಣ ಸರಿಯಾಗಿ ನಡೆಯದೆ ಅಲ್ಲಿ ಕುಂಟುತ್ತ ಇದೆ. ಅದಕ್ಕಾದರೂ ನೀವು ಹೋಗಲೇಬೇಕು. ಮುಂದೆ ಅಲ್ಲಿಯೂ ನೀವು ಸುಧಾರಿಸಿಕೊಂಡು ಸಣ್ಣ ಪ್ರೆಸ್ ತೆರೆಯುವುದೋ ಪುಸ್ತಕ ವ್ಯಾಪಾರವೋ ಮಾಡಬಹುದಲ್ಲ...'

ಕನ್ನಡ–ಕನ್ನಡ ನಿಘಂಟು ಕೆಲಸದಲ್ಲಿ